ಪಿ.ಡಬ್ಲ್ಯೂ: 1

**<u>ದಿನಾಂಕಃ 05-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲುಃ ಶ್ರೀ ಎಂ.ಬಿ.ಎನ್. 1 ರಿಂದ 21 ಮತ್ತು 14 ನೇ ಪ್ರತಿವಾದಿಯ ವಾರಸುದಾರರರ ಪರ ವಕೀಲರಿಂದಃ</u>**

**3.** ಈ ದಾವೆ ಮಾಡುವುದಕ್ಕಿಂತ ಮೊದಲು ದಾವಾಸ್ತಿಯಲ್ಲಿ ನಮಗೆ ಹಿಸ್ಸೆ ಇದೆ ಎಂದು ಯಾವಾಗ ಕೇಳಿರುತ್ತೀರಿ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ತಾರೀಖು ನೆನಪಿಲ್ಲ ಎಂದು ನುಡಿಯುತ್ತಾರೆ. ಹಿಸ್ಸೆ ಕುರಿತು ನನ್ನ ಅಣ್ಣನಾದ 2 ನೇ ಪ್ರತಿವಾದಿಯನ್ನು ಕೇಳಿರುತ್ತೇನೆ. 2 ರಿಂದ 4 ನೇ ಪ್ರತಿವಾದಿಯರು ದಾವಾಸ್ತಿಗಳಲ್ಲಿ ಅವರವರಿಗೆ ಬರತಕ್ಕಂತ ಹಿಸ್ಸೆಯನ್ನು ಪಾಲು ವಿಭಾಗ ಮಾಡಿಕೊಂಡು ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸರಿ. ನನ್ನ ತಂಗಿಯಾದ ಫಕ್ಕೀರವ್ವ ಮರಣ ಹೊಂದಿರುತ್ತಾಳೆ. ಆಕೆಯ ಮರಣ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಹಾಜರು ಮಾಡಿರುತ್ತೇನೆ. 3 ನೇ ವಾದಿಯಾದ ಫಕ್ಕೀರಪ್ಪ ಹನುಮಂತಪ್ಪ ಹರಿಜನ ಇತನು ಫಕ್ಕೀರವ್ವನ ಮಗ ಎಂದು ತೋರಿಸಲು ವಾರಸಾ ಪ್ರಮಾಣ ಪತ್ರವನ್ನು ಹಾಜರು ಪಡಿಸಿರುತ್ತೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಮಕ್ಕಳು ಕೊಟ್ಟಿರುತ್ತಾರೆಂದು ನುಡಿಯುತ್ತಾರೆ. ನನ್ನ ತಂಗಿಯ ಗಂಡನಾದ ಹನುಮಂತಪ್ಪನನ್ನು ಈ ದಾವೆಯಲ್ಲಿ ಪಕ್ಷಗಾರನನ್ನಾಗಿ ಮಾಡಿಲ್ಲ. ಸದ್ರಿಯವರನ್ನು ಏಕೆ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ನಾವು ಹೆಣ್ಣು ಮಕ್ಕಳಷ್ಟೇ ದಾವೆ ಮಾಡಿರುತ್ತೇವೆ, ಗಂಡು ಮಕ್ಕಳನ್ನು ಸೇರಿಸಿಲ್ಲ ಎಂದು ನುಡಿಯುತ್ತಾರೆ. ನಾವೆಲ್ಲರೂ ಸೇರಿ ನನ್ನ ತಂಗಿಯ ಗಂಡನಾದ ಹನುಮಂತಪ್ಪನನ್ನು ಕೇಳಲು ಹೋದಾಗ ಆತನು ಗಂಡು ಮಕ್ಕಳು ಹಿಸ್ಸೆ ಮಾಡಿಕೊಂಡು ಉಳುಮೆ ಮಾಡುತ್ತಿದ್ದು ಅದನ್ನು ಕೇಳುವುದು ಬೇಡ ಎಂದು ಹೇಳಿದ ಕಾರಣ ಆತನನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿಯಲ್ಲ.

**ಪಿ.ಡಬ್ಲ್ಯೂ: 1**

**4.** 6 ರಿಂದ 21 ನೇ ಪ್ರತಿವಾದಿಯರು ನನ್ನ ತಂದೆಗೆ ಸಂಬಂಧಿಸಿದ ಆಸ್ತಿಗಳಿಗೆ ಯಾವುದೇ ರೀತಿಯ ಸಂಬಂಧವಿಲ್ಲ ಎಂದರೆ ಸರಿ. ನನ್ನ ತಂದೆಯ ಆಸ್ತಿಗಳಲ್ಲಿ 6 ರಿಂದ 21 ನೇ ಪ್ರತಿವಾದಿಯರ ಹೆಸರು ನಮೂದು ಇರುವುದರಿಂದ ಅವರನ್ನು ಪಕ್ಷಗಾರರನ್ನಾಗಿ ಮಾಡಿರುತ್ತೇನೆ. ನನ್ನ ತಂದೆಗೆ ಸಂಬಂಧಿಸಿದ ಆಸ್ತಿ ಮತ್ತು 6 ರಿಂದ 21 ನೇ ಪ್ರತಿವಾದಿಯರ ಆಸ್ತಿಗಳು ಜಂಟಿಯಾಗಿ ಇದೆ ಎಂದರೆ ಸರಿ. ನನ್ನ ತಂದೆಯ ತಮ್ಮನಾದ ಸಣ್ಣ ಹನಮಂತಪ್ಪನಿಗೆ ಸೇರಿದ ಆಸ್ತಿಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ಅದೇ ರೀತಿ ನ್ನನ ತಂದೆಯ ಇನ್ನೊಬ್ಬ ಸಹೋದರನಾದ ಸಣ್ಣಯಲ್ಲಪ್ಪನಿಗೆ ಸಂಬಂಧಪಟ್ಟ ಆಸ್ತಿಗಳನ್ನು ಸೇರಿಸಿಲ್ಲ ಎಂದರೆ ಸಾಕ್ಷಿಯು ಆತನಿಗೆ ಸಂಬಂಧಪಟ್ಟ ಆಸ್ತಿ ದಾವಾ ಆಸ್ತಿಯಲ್ಲಿ ಬರುತ್ತದೆ ಎಂದು ನುಡಿಯುತ್ತಾರೆ.

**5.** ಶೆಡ್ಯೂಲ್-ಬ 1 ನೇ ಆಸ್ತಿಯಾದ ಸರ್ವೆ ನಂಬರ 37/1 ರಲ್ಲಿ 05 ಎಕರೆ 29 ಗುಂಟೆ ಜಮೀನು ಇಜಾರಿಲಕ್ಮಾಪುರ ಗ್ರಾಮದಲ್ಲಿ ಇದೆ. ಸದ್ರಿ ಜಮೀನಿನ ಚೆಕ್ಕಬಂದಿ ನನಗೆ ಗೊತ್ತಿಲ್ಲ. ಶೆಡ್ಯೂಲ್ -ಬ 2 ನೇ ಆಸ್ತಿಯಾದ ಸರ್ವೆ ನಂಬರ 37/3 ರಲ್ಲಿ 33 ಗುಂಟೆ 12 ಆಣೆ ಶೇತ್ಕಿ ಜಮೀನು ಆಗಿರುತ್ತದೆ ಅದರ ಚೆಕ್ಕಬಂದಿ ಗೊತ್ತಿಲ್ಲ. ಸದ್ರಿ ಎರಡು ಜಮೀನುಗಳನ್ನು ಯಾರು ಸಾಗುವಳಿ ಮಾಡುತ್ತಾರೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ನನ್ನ ಸಹೋದರರಾದ 2 ರಿಂದ 5 ನೇ ಪ್ರತಿವಾದಿಯರು ಉಳುಮೆ ಮಾಡುತ್ತಾರೆ.

( ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಪ್ರತಿವಾದಿಯರ ಪರ ವಕೀಲರು ಕಾಲಾವಕಾಶ ಕೋರಿದ್ದು, ನೀಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

-ಸಹಿ-

1 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ಹಾವೇರಿ.